# TET ನೇಮಕಾತಿ ಪರೀಕ್ಷೆ – 2019

ಸಮಯ:150 ನಿಮಿಷಗಳು | ವಿದ್ಯಾರ್ಹತೆ : ಬಿ.ಎ., ಬಿ.ಇಡ್. | ಗರಿಷ್ಠ ಅಂಕಗಳು:150 | ದಿನಾಂಕ : 03-02-2019

**1. "ನನಗೆ ಹೊಡೆದ ಹೊಡೆತಗಳು ಭಾರತದಲ್ಲಿ ಬ್ರಿಟಿಷ್ ಆಡಳಿತದ ಶವಪೆಟ್ಟಿಗೆಯ ಕೊನೆಯ ಮೊಳೆಗಳಾಗಲಿವೆ". ತಮ್ಮ ಸಾವಿಗೆ ಮುನ್ನ ಹೀಗೆಂದು ಘೋಷಿಸಿದವರು:**

1. ಬಾಲಗಂಗಾಧರ ತಿಲಕ್ 2. ಸುಭಾಷ್ ಚಂದ್ರ ಬೋಸ್
3. ಲಾಲಾ ಲಜಪತರಾಯ್ 4. ಬಿಪಿನ್ ಚಂದ್ರಪಾಲ್

**ವಿವರಣೆ:** 1928ರಲ್ಲಿ ಪಂಜಾಬಿನಲ್ಲಿ ಸೈಮನ್ ಕಮಿಷನ್ ವಿರುದ್ಧ ಪ್ರತಿಭಟಿಸುತ್ತಿದ್ದಾಗ ಪೋಲಿಸರ ಲಾಠಿ ಏಟಿಗೆ ನವೆಂಬರ್ 27ರಂದು ಬಲಿಯಾದರು ಆ ಸಂದರ್ಭದಲ್ಲಿ ಅವರು. 'ನನ್ನ ಶರೀರದ ಮೇಲೆ ಬಿಡಿದ ಪ್ರತಿಯೊಂದು ಲಾಠಿ ಹೊಡೆತ ಬ್ರಿಟಿಷ್ ಸಾಮ್ರಾಜ್ಯವನ್ನು ಶವಪೆಟ್ಟಿಗೆಗೆ ಹೊಡೆದ ಮೊಳೆಯಾಗುತ್ತದೆ.

**2. ಸ್ವಾತಂತ್ರ್ಯಾನಂತರ ಭಾರತ ಸರ್ಕಾರಕ್ಕೆ ಹರಸಾಹಸದ ಕೆಲಸವಾದದ್ದು:**

1. ನಿರಾಶ್ರಿತರ ಸಮಸ್ಯೆ 2. ಮತೀಯ ಗಲಭೆಗಳು
3. ಸರ್ಕಾರದ ರಚನೆ
4. ದೇಶೀಯ ಸಂಸ್ಥಾನಗಳ ವಿಲೀನೀಕರಣ

**ವಿವರಣೆ:** ಸ್ವತಂತ್ರ್ಯ ನಂತರ ನಿರಾಶ್ರಿತರ ಸಮಸ್ಯೆ, ಕೋಮು ಗಲಭೆಗಳು, ಭೌಗೋಳಿಕ ಪ್ರಭಾವ, ರಾಜಕೀಯ ಪ್ರಭಾವ, ಆರ್ಥಿಕ ಪ್ರಭಾವ ಸೇನಾಪಡೆಗಳು ಹಂಚಿಕೆ, ಸಮಸ್ಯೆಗಳು ಉಂಟಾದವು.

**3. "ದುರ್ಗೇಶ್ ನಂದಿನಿ" ಇದು ಇವರ ಪ್ರಥಮ ಕಾದಂಬರಿಯಾಗಿತ್ತು.**

1. ಶರತ್‌ಚಂದ್ರ 2. ರಮಾಂಶಂಕರ್ ರಾಯ್
3. ರವೀಂದ್ರನಾಥ ಠಾಕೂರ್
4. ಬಂಕಿಮ್ ಚಂದ್ರ ಚಟ್ಟೋಪಾಧ್ಯಾಯ

**ವಿವರಣೆ:** ದುರ್ಗೇಶ ನಂದಿನಿ 1865ರಲ್ಲಿ ಭಾರತೀಯ ಬರಹಗಾರ ಬಂಕಿಮಚಂದ್ರ ಚಟ್ಟೋಪಾಧ್ಯಾಯರಿಂದ ಬರೆಯಲ್ಪಟ್ಟ ಒಂದು ಬಂಗಾಳಿ ಐತಿಹಾಸಿಕ ಪ್ರಣಯ ಕಾದಂಬರಿ.

**4. 1857ರ ಜೂನ್‌ನಲ್ಲಿ ಬ್ರಿಟಿಷ್ ವಿರುದ್ಧ ಲಕ್ನೋದಲ್ಲಿ ದಂಗೆ ಎದ್ದವರು:**

1. ಬೇಗಂ ಹಜರತ್ ಮಹಲ್
2. ಮಂಗಲ್ ಪಾಂಡೆ
3. ನಾನಾ ಸಾಹೇಬ್ 4. ತಾಂತ್ಯಾ ಟೋಪೆ

**ವಿವರಣೆ:** ಲಖ್ನೋ(ಔಧ್) ಜಾಧ್‌ನ ರಾಜಧಾನಿಯಾದ ಲಕ್ನೋದಲ್ಲಿ ದಂಗೆಯ ನಾಯಕತ್ವವನ್ನು ವಜೀದ್ ಅಲಿಷಾನ ಪತ್ನಿ ಔಧ್‌ನ ಬೇಗಂ ಹಜರತ್ ಮಹಲ್ ವಹಿಸಿದ್ದಳು.

**5. ಹಿಂದೂಸ್ತಾನದ ಪ್ರಥಮ ನಕ್ಷೆ ನೀಡಿದವನು:**

1. ರಾಬರ್ಟ್ ಕ್ಲೈವ್ 2. ಜೇಮ್ಸ್ ರೆನೆಲ್
3. ಕನ್ನಾಟ್‌ನ ಡ್ಯೂಕ್ 4. ರಾಜಕುಮಾರ ಆರ್ಥರ್

**6. ಭಕ್ತಿ ಎಂಬ ಸಂಸ್ಕೃತ ಪದವು "ಭಜ್" ಎಂಬ ಮೂಲದಿಂದ ಬಂದಿದ್ದು, ಹಾಗೆಂದರೆ:**

1. ಜ್ಞಾನ 2. ಶಕ್ತಿ
3. ಮೋಕ್ಷ 4. ಕರ್ಮ

**7. ತರುಣ ಬಂಗಾಳ ಚಳುವಳಿಯ ಹರಿಕಾರ:**

1. ಹೆನ್ರಿ ಲೂಯಿಸ್ ವಿವಿಯನ್ ಡೆರೋಜಿಯೊ
2. ಆ್ಯನಿಬೆಸೆಂಟ್
3. ಮೇಡಂ ಬ್ಲಾವೆಟ್ಸ್ಕಿ 4. ಕರ್ನಲ್ ಆಲ್ಕಾಟ್

**8. ದೆಹಲಿ ಸುಲ್ತಾನರ ಕಾಲದ ಬೃಹತ್ ಉದ್ಯಮ:**

1. ನೇಯ್ಗೆ 2. ಕಬ್ಬಿಣ
3. ತಾಮ್ರ 4. ಸಕ್ಕರೆ

**ವಿವರಣೆ:** ದೆಹಲಿಯ ಸುಲ್ತಾನರಲ್ಲಿ ಒಟ್ಟು 5 ಸಂತತಿಗಳು ಕ್ರಿ.ಶ.1206ರಿಂದ 1526ರವರೆಗೆ ರಾಜ್ಯಾಡಳಿತ ಮಾಡಿದರು. ಗುಲಾಮಿ, ಖಿಲ್ಜಿ, ತುಘಲಕ್, ಸೈಯದ್, ಲೂದಿ ಸಂತತಿಗಳು. ಈ ಅವಧಿಯಲ್ಲಿ ಭಾರತದ ಮೂಲೆ ಮೂಲೆಯಲ್ಲೂ ಹತ್ತಿ ನೇಕಾರರಿದ್ದರು.

**9. ಸರಿಯಾದ ಕ್ರಮದಲ್ಲಿ ರಜಪೂತ ಬೃಹತ್ ಉದ್ಯಮ:**

1. ಗುರ್ಜರ ಪ್ರತಿಹಾರರು – ಕನೌಜ್
   ಗಹಡವಾಲರು – ಬುಂದೇಲ್ ಖಂಡ್
   ಚಾಂದೇಲರು – ವಾರಣಾಸಿ
   ಚೌಹಾನರು – ಅಜ್ಮೀರ್
2. ಗಹಡವಾಲರು – ಕನೌಜ್
   ಗುರ್ಜರ ಪ್ರತಿಹಾರರು – ಬುಂದೇಲ್‌ಖಂಡ್
   ಚಾಂದೇಲರು – ವಾರಣಾಸಿ
   ಚೌಹಾನರು – ಅಜ್ಮೀರ್
3. ಗುರ್ಜರ ಪ್ರತಿಹಾರರು – ಕನೌಜ್
   ಗಹಡವಾಲರು – ವಾರಣಾಸಿ
   ಚಾಂದೇಲರು – ಬುಂದೇಲ್‌ಖಂಡ್
   ಚೌಹಾನರು – ಅಜ್ಮೀರ್
4. ಗುರ್ಜರ ಪ್ರತಿಹಾರರು – ಕನೌಜ್
   ಗಹಡವಾಲಯ – ಅಜ್ಮೀರ್
   ಚಾಂದೇಲರು – ಬುಂದೇಲ್‌ಖಂಡ್
   ಚೌಹಾನರು – ವಾರಣಾಸಿ

**10. ಅಲ್ಲಾ ಉದ್ದೀನ್ ಖಿಲ್ಜಿಯು "ಸಹನ-ಇ-ಮಂಡಿ" ಎಂಬ ಉನ್ನತಾಧಿಕಾರಿಯನ್ನು ಇದೊಂದನ್ನು ನಿಯಂತ್ರಿಸಲು ನೇಮಿಸಿದನು:**

1. ಸೈನ್ಯ
2. ಸಿಪಾಯಿ
3. ಕುದುರೆಗಳ ದುರುಪಯೋಗ
4. ಮಾರುಕಟ್ಟೆಗಳು

**ವಿವರಣೆ:** ಅಲ್ಲಾವುದ್ದೀನ್ ಖಿಲ್ಜಿ(1296–1316)ಯು ಪ್ರತಿ ಮಾರುಕಟ್ಟೆಯಲ್ಲಿ ಶಹನಾ-ಇ-ಮಂಡಿ ಎಂಬ ಮಾರುಕಟ್ಟೆ ನಿಯಂತ್ರಣಾಧಿಕಾರಿಗಳನ್ನು ನೇಮಿಸಿದ್ದನು.

**11. ಪಟ್ಟದ ಕಲ್ಲಿನಲ್ಲಿರುವ ದೇವಾಲಯಗಳಲ್ಲಿ ಅತಿ ಪ್ರಮುಖವಾದ ದೇವಾಲಯ:**

1. ವಿರೂಪಾಕ್ಷ 2. ಮಲ್ಲಿಕಾರ್ಜುನ
3. ವಿಶ್ವನಾಥ 4. ಪಾಪನಾಥ

**ವಿವರಣೆ:** ಪಟ್ಟದ ಕಲ್ಲು ಚಾಲುಕ್ಯರ ವಾಸ್ತುಶಿಲ್ಪದ ತವರು ಮನೆಯಾಗಿದೆ. ಲೋಕಮಹಾದೇವಿ ನಿರ್ಮಿಸಿದ್ದ ವಿರುಪಕ್ಷ ದೇವಾಲಯ ಇಲ್ಲಿನ ಅತಿ ದೊಡ್ಡ ದೇವಾಲಯವಾಗಿದೆ. ಇದು ದ್ರಾವಿಡ ಶೈಲಿಯಲ್ಲಿದೆ.

1) 3 2) 2 3) 4 4) 1 5) 2 6) 1 7) 1 8) 1 9) 3
10) 4 11) 1



pramod@
Scanned with CamScanner

12. "ವಾತಾಪಿಕೊಂಡ" ಎಂಬ ಬಿರುದನ್ನು ಪಡೆದವನು:

1. ಶಿವಸ್ಕಂದ ವರ್ಮ 2. ಇಮ್ಮಡಿ ಪುಲಿಕೇಶಿ
3. ನರಸಿಂಹ ವರ್ಮ-I 4. ಮಹೇಂದ್ರ ವರ್ಮ

ವಿವರಣೆ: (ಕ್ರಿ.ಶ. 630-668) ಪಲ್ಲವರ ಮಹೇಂದ್ರ ವರ್ಮನ ಮಗನಾದ 1ನೇ ನರಸಿಂಹವರ್ಮನು ವಾತಾಪಿಯನ್ನು ಪುಲಿಕೇಶಿಯಿಂದ ಗೆದ್ದು 'ವಾತಾಪಿಗೊಂಡ' ಎಂಬ ಬಿರುದನ್ನು ಪಡೆದನು.

13. ಎರಡನೇ ಬೌದ್ಧ ಸಮಾವೇಶವು ನಡೆದದ್ದು:

1. ರಾಜಗೃಹ 2. ವೈಶಾಲಿ
3. ಪಾಟಲೀಪುತ್ರ 4. ಕುಂಡಲವನ

ವಿವರಣೆ: ಬೌದ್ಧ ಧರ್ಮದ ಮೊದಲನೆ ಸಮ್ಮೇಳನವುರಾಜ ಗೃಹದಲ್ಲಿ ಕ್ರಿ.ಪೂ. 483 ಅಜಾತಶತ್ರುವಿನ ಆಶ್ರಯದಲ್ಲಿ ಹಾಗೂ ಮಹಾಕಶ್ಯಪನ ಅಧ್ಯಕ್ಷತೆಯಲ್ಲಿ ನಡೆಯಿತು. 2ನೇ ಸಮ್ಮೇಳನವು ವೈಶಾಲಿಯಲ್ಲಿ ಕ್ರಿ.ಪೂ. 380ರಲ್ಲಿ ಕಾಳಾಶೋಕನ ಆಶ್ರಯದಲ್ಲಿ ಸಭಾಕಾಮಿಯ ಅಧ್ಯಕ್ಷತೆಯಲ್ಲಿ ನಡೆಯಿತು.

14. ಗುಪ್ತರ ವಂಶದ ಸ್ಥಾಪಕರು:

1. ಬುದ್ಧಗುಪ್ತ 2. ಪುರಗುಪ್ತ
3. ಸ್ಕಂದಗುಪ್ತ 4. ಶ್ರೀಗುಪ್ತ

ವಿವರಣೆ: ಗುಪ್ತ ಮನೆತನದ ಸ್ಥಾಪಕ ಶ್ರೀಗುಪ್ತ ಆದರೆ ಗುಪ್ತರ ನಿಜವಾದ ಇತಿಹಾಸ ಆರಂಭವಾಗುವುದು ಒಂದನೇ ಚಂದ್ರಗುಪ್ತನ ಕಾಲದಿಂದ (ಕ್ರಿ.ಶ. 320-335) ಶ್ರೀಗುಪ್ತನಿಗೆ ಮಹಾರಾಜ ಎಂಬ ಬಿರುದಿತ್ತು.

15. ಇವರಲ್ಲಿ ಒಬ್ಬರ ಆಡಳಿತದಲ್ಲಿ ಸಹಕಾರಿಸಲು ಅಷ್ಟಪ್ರಧಾನರೆಂಬವರು ಇದ್ದದ್ದು:

1. ಶಿವಾಜಿ 2. ಔರಂಗಜೇಬ್
3. ರಾಜರಾಜ 4. ಹರ್ಷವರ್ಧನ

ವಿವರಣೆ: ಶಿವಾಜಿಯ ಆಡಳಿತದಲ್ಲಿದ್ದ ಅಷ್ಟ ಪ್ರಧಾನರು.

1. ಪೇಶ್ವೆ 2. ಸೇನಾಪತಿ
3. ನ್ಯಾಯಾಧೀಶ 4. ಅಮಾತ್ಯ
5. ಪಂಥ ಸಚಿವ 6. ಸುಮಂತ
7. ಮಂತ್ರಿ 8. ದಂಡಾಧ್ಯಕ್ಷರು

16. "ಗಂಗೈಕೊಂಡ ಚೋಳಪುರಂ" ಎಂಬ ಹೆಸರಿನ ಹೊಸ ರಾಜಧಾನಿಯ ನಿರ್ಮಾತೃ:

1. ರಾಜರಾಜ 2. ಪರಾಂತಕ
3. ಒಂದನೇ ರಾಜೇಂದ್ರ 4. ಆದಿತ್ಯ

ವಿವರಣೆ: ಚೋಳ ಸಂತತಿಯ ಅರಸ 1ನೇ ರಾಜೇಂದ್ರ ಚೋಳನು ಪಂಡಿತ ಚೋಳ, ಕೇದಾರಕೊಂಡ, 'ಗಂಗೈಕೊಂಡ ಚೋಳ' (ಗಂಗಾ ಪ್ರದೇಶ ವಿಜೇತ) ಎಂಬ ಬಿರುದು ಪಡೆದನು.

17. ಬುಕ್ಕರಾಯನು ಈ ದೇಶದ ರಾಜನಿಗೆ ರಾಯಭಾರಿಯನ್ನು ಕಳುಹಿಸಿಕೊಟ್ಟನು:

1. ಪರ್ಶಿಯಾದ ರಾಜ 2. ಈಜಿಪ್ಟಿನ ರಾಜ
3. ಚೀನಾದ ರಾಜ 4. ಸಿಲೋನ್ ರಾಜ

ವಿವರಣೆ: ಚೀನಾ ದೇಶದ ಮಿಂಗ್ ವಂಶದ ಸಾಮ್ರಾಟನ ಆಸ್ಥಾನಕ್ಕೆ ಬುಕ್ಕರಾಯನು ರಾಯಭಾರಿಗಳನ್ನು ಕಳುಹಿಸಿದನು.

18. "ಅಕ್ಬರ್‌ನಾಮ" ವನ್ನು ಆಂಗ್ಲಭಾಷೆಗೆ ಭಾಷಾಂತರಿಸಿದವನು:

1. 1.ಸರ್ ವಿಲಿಯಂ ಜೋನ್ಸ್
2. ಹೆನ್ರಿ ಬೆವಿರಿಡ್ಜ್
3. ಜೇನ್ ಆಡಮ್ಸ್ 4. ಜಾನ್ ಇಂಫೆ

ವಿವರಣೆ: ಅಕ್ಬರ್‌ನ ಆಸ್ಥಾನದಲ್ಲಿದ್ದ ವಿದ್ವಾಂಸ ಅಬುಲ್ ಫಜಲ್ ಎಂಬುವನು ಐನ್-ಎ-ಅಕ್ಬರಿ ಮತ್ತು ಅಕ್ಬರ್ ನಾಮಗಳನ್ನು ಪರ್ಷಿಯನ್‌ನಲ್ಲಿ ಬರೆದನು. ಅಕ್ಬರ್‌ನಾಮವನ್ನು ಹೆನ್ರಿ ಬೆವಿರಿಡ್ಜ್ ಆಂಗ್ಲ ಭಾಷೆಗೆ ಭಾಷಾಂತರಿಸಿದಲ್ಲಿ

19. ಕೆಳಗಿನವರುಗಳಲ್ಲಿ ಒಬ್ಬರು ಕಲ್ಕತ್ತಾದ ಅಲಿಪೋರ್ ಮೃಗಾಲಯವನ್ನು ವ್ಯವಸ್ಥೆಗೊಳಿಸಿದರು:

1. ಫ್ರಾನ್ಸಿಸ್ ಬುಚಾನನ್ 2. ವೆಲ್ಲೆಸ್ಲಿ
3. ಫ್ರಾನ್ಸಿಸ್ ಬೇಕನ್ 4. ಫ್ರಾನ್ಸಿಸ್ ಮಾರ್ಟಿನ್

20. ಸಿಮ್ಲಾ (ಶಿಮ್ಲಾ) ಒಂದು ಬೇಸಿಗೆಧಾಮವಾಗಿ ಈ ಯುದ್ಧದ ಸಮಯದಲ್ಲಿ ಗುರುತಿಸಲ್ಪಟ್ಟಿತು:

1. ರೋಹಿಲರ ಯುದ್ಧ 2. ಮರಾಠರ ಯುದ್ಧ
3. ಬರ್ಮೀಯರ ಯುದ್ಧ 4. ಗೂರ್ಖ ಯುದ್ಧ

21. ಅಜೈವಿಕ ಪರಿಸರದ ಘಟಕಾಂಶವು:

1. ಸಸ್ಯ 2. ಪ್ರಾಣಿ
3. ಮಾನವ 4. ಭೂಮಿ

ವಿವರಣೆ:

ಅಜೈವಿಕ ಘಟಕಗಳು: ಮಣ್ಣು, ಗಾಳಿ, ನೀರು, ಆಮ್ಲಜನಕ
ಜೈವಿಕ ಘಟಕಗಳು: ಮೊಲ, ಜಿಂಕೆ, ಮೇಕೆ.

22. ಜನಸಂಖ್ಯಾ ಬೆಳವಣಿಗೆಗೆ ಮುಖ್ಯವಾದ ಮೂರು ಅಂಶಗಳೆಂದರೆ:

1. ಜನನ, ಮರಣ ಮತ್ತು ವಿವಾಹ
2. ಜನನ, ಮರಣ ಮತ್ತು ವಲಸೆ
3. ಜನನ, ಮರಣ ಮತ್ತು ಆಯಸ್ಸು
4. ಜನನ, ಮರಣ ಮತ್ತು ಶಿಕ್ಷಣ

ವಿವರಣೆ: ಹೆಚ್ಚು ಜನನ ಪ್ರಮಣ ಕಡಿಮೆ ಮರಣ ಪ್ರಮಾಣ ಮತ್ತು ಆಯಸ್ಸು ಅಂಶಗಳು ಜನಸಂಖ್ಯಾ ಬೆಳವಣಿಗೆಗೆ ಮುಖ್ಯವಾದ ಕಾರಣವಾಗಿವೆ.

23. "ಸೂರ್ಯ ಉದಯಿಸುವ ಕೈಗಾರಿಕೆ" ಎಂದು ಕರೆಯಲ್ಪಡುವ ಕೈಗಾರಿಕೆ:

1. ಕಬ್ಬಿಣ ಕಾರ್ಖಾನೆ 2. ಹತ್ತಿಗಿರಣಿ/ಕೈಗಾರಿಕೆ
3. ಮಾಹಿತಿ ತಂತ್ರಜ್ಞಾನ 4. ಸಕ್ಕರೆ ಕೈಗಾರಿಕೆ

ವಿವರಣೆ: ಅತಿ ಕಡಿಮೆ ಅವಧಿಯಲ್ಲಿ ಅತಿ ವೇಗವಾಗಿ ಅಭಿವೃದ್ಧಿ ಹೊಂದುವ ಕೈಗಾರಿಕೆಗಳಿಗೆ ಸೂರ್ಯ ಉದಾಯಿಸುವ ಕೈಗಾರಿಕೆ ಎಂದು ಕರೆಯಲಾಗುತ್ತದೆ. ಉದಾ: ಮಹಿತಿ ತಂತ್ರಜ್ಞಾನವು ಅತಿ ಹೆಚ್ಚು ಅಭಿವೃದ್ಧಿ ಹೊಂದಿದೆ.

24. ರೇಡಿಯೋ ತರಂಗಗಳನ್ನು ಭೂಮಿಗೆ ಹಿಂದಿರುಗಿ ವರ್ಗಾಯಿಸುವ ಪದರ:

1. ಸಮೋಷ್ಣಮಂಡಲ 2. ಉಷ್ಣತಾಮಂಡಲ
3. ಮಧ್ಯಂತರ ಮಂಡಲ 4. ಬಾಹ್ಯಮಂಡಲ

ವಿವರಣೆ: ವಾತಾವರಣದ ರಚನೆಯು 5 ಪದರುಗಳಾಗಿ ವಿಂಗಡಿಸಲಾಗಿದೆ.

ಪರಿವರ್ತನಾಮಂಡಲ(Troposphere)ಅತ್ಯಂತ ಕೆಳಪದರು.
ಸಮೋಷ್ಣ ಮಂಡಲ (Stratosphere) 2ನೇ ಪದರು (ಓಝೋನ್)
ಮಧ್ಯಂತರ ಮಂಡಲ (Mesosphere) ಅತಿ ಶೀತ ಉಷ್ಣಾಂಶ
ಉಷ್ಣತಾ ಮಂಡಲ (Thermosphere) ರೇಡಿಯೋ ತರಂಗ ಪ್ರತಿಫಲಿಸುವುದು
ಬಾಹ್ಯ ಮಂಡಲ (Exosphere) ಅತ್ಯಂತ ಮೇಲಿನ ಪದರು

12) 3 13) 2 14) 4 15) 1 16) 3 17) 3 18) 2 19) 1 20) 4
21) 4 22) 2 23) 3 24) 2



pramod@
Scanned with CamScanner

25. "ಅಣಬೆ ಬಂಡೆಗಳು" ಕಂಡುಬರುವುದು:
1. ಮರುಭೂಮಿಗಳು 2. ನದಿ ಕಣಿವೆಗಳು
3. ಹಿಮ ನದಿಗಳು 4. ಸಮುದ್ರಗಳು

26. "ಗೋಲ್ಡನ್ ಫೈಬರ್" ಎಂದು ಕರೆಯುವುದು:
1. ಟೀ 2. ಹತ್ತಿ
3. ಸೆಣಬು 4. ಜೋಳ

27. ಪೂರ್ವಘಟ್ಟದ ಅತಿ ಎತ್ತರದ ಶಿಖರವೆಂದರೆ:
1. ಆನೈಮುಡಿ 2. ಮಹೇಂದ್ರಗಿರಿ
3. ಕಾಂಚನಜುಂಗ 4. ಕಾಶಿ

ವಿವರಣೆ: ಪೂರ್ವ ಘಟ್ಟಗಳನ್ನು ಮಹೇಂದ್ರ ಪರ್ವತಗಳೆಂದು ಕರೆಯುವರು. ಇವು ಉತ್ತರದ ಪಶ್ಚಿಮ ಬಂಗಾಳ ರಾಜ್ಯದಿಂದ ಒಡಿಸ್ಸಾದ ಮೂಲಕ ಆಂಧ್ರಪ್ರದೇಶ ಮಾರ್ಗವಾಗಿ ದಕ್ಷಿಣದ ತಮಿಳುನಾಡು ರಾಜ್ಯಕ್ಕೆಸಾಗಿವೆ.

28. ಪ್ರಥಮ ಯಶಸ್ವೀ ಯಾಂತ್ರೀಕೃತ ಬಟ್ಟೆಯ ಗಿರಣಿ ಸ್ಥಾಪಿತವಾದುದು:
1. ಕೊಯಂಬತ್ತೂರ 2. ಅಹಮದಾಬಾದ್
3. ಚೆನ್ನೈ 4. ಮುಂಬೈ

ವಿವರಣೆ: ಭಾರತದಲ್ಲಿ 1818ರಲ್ಲಿ ಪ್ರಥಮ ಹತ್ತಿಬಟ್ಟೆ ಕಾರ್ಖಾನೆಯನ್ನು ಕೊಲ್ಕತ್ತಾದ ಬಳಿ ಫೋರ್ಟ್ ಗ್ಲೋಸ್ಟರ್ ಎಂಬಲ್ಲಿ ಸ್ಥಾಪಿಸಲಾಗಿತ್ತು ಕಾರಣಾಂತರದಿಂದ ಇದು ವಿಫಲವಾಯಿತು. 1854ರಲ್ಲಿ ಬಾಂಬೆ ಸ್ಪಿನ್ನಿಂಗ್ ಅಂಡ್ ವೇವಿಂಗ್ ಕಂಪನಿಯ ಹೆಸರಿನಲ್ಲಿ ಮತ್ತೊಂದು ಕಾರ್ಖಾನೆಯ ಸ್ಥಾಪಿಸಲಾಯಿತು. ಇದು ಭಾರತದ ಯಶಸ್ವಿ ಹತ್ತಿ ಬಟ್ಟೆ ಕಾರ್ಖಾನೆಯೆ ಹೆಸರಾಯಿತು.

29. ಕರಗಿದ ಲಾವಾರಸದಿಂದ ಉಂಟಾಗುವ ಕಲ್ಲು/ಶಿಲೆ:
1. ಅಗ್ನಿ ಶಿಲೆ 2. ಸಂಚಿತ ಶಿಲೆ
3. ರೂಪಾಂತರ ಶಿಲೆ 4. ಸುಣ್ಣದ ಕಲ್ಲು

ವಿವರಣೆ: ಶಿಲೆಗಳ ಅಧ್ಯಾಯನವನ್ನು ಪೆಟ್ರಾಲಜಿ ಎನ್ನುವರು. ರಾಸಾಯನಿಕ ಕ್ರಿಯೆಯಿಂದಾದ ಪದರು ಶಿಲೆಗಳು ಉದಾ: ಸುಣ್ಣದ ಕಲ್ಲು, ಡಾಲೋಮೈಟ್, ಸೀಮೆಸುಣ್ಣ, ಇತ್ಯಾದಿ.

30. "ಮಾನ್‌ಸೂನ್" ಎಂಬ ಪದವು ಅರೆಬಿಕ್‌ನ ಈ ಪದದಿಂದ ಬಂದಿದೆ:
1. ಮೌಸಮ್ 2. ಮೌಸಿಮ್
3. ಮೌಸಿನ್ 4. ಮಾಸುಮ್

31. ಬಾಕ್ಸೈಟ್ ಅದಿರನ್ನು ಈ ವಸ್ತುವಿನ ಉತ್ಪಾದನೆಗೆ ಬಳಸುತ್ತಾರೆ:
1. ಆಭರಣಗಳು 2. ಅಲ್ಯೂಮಿನಿಯಂ
3. ಗಡಿಯಾರ 4. ಕ್ಯಾಲಿಕೋ ಪ್ರಿಂಟಿಂಗ್

ವಿವರಣೆ: ಅಲ್ಯೋಮಿನಿಯಂ ಲೋಹ ತಯಾರಿಕೆಯಲ್ಲಿ ಬಾಕ್ಸೈಟ್ ಅದಿರನ್ನು ಕಚ್ಚಾವಸ್ತುವನ್ನಾಗಿ ಉಪಯೋಗಿಸುವರು. ಓರಿಸ್ಸಾ ರಾಜ್ಯವು ಬಾಕ್ಸೈಟ್ ಉತ್ಪಾದನೆಯಲ್ಲಿ ಪ್ರಥಮ ಸ್ಥಾನದಲ್ಲಿದೆ.

32. ಪ್ರಪಂಚದಲ್ಲಿ ಹೆಚ್ಚು ತಾಮ್ರ ಉತ್ಪಾದನೆಯ ದೇಶ ಇದಾಗಿದೆ:
1. ಬೊಲಿವಿಯ 2. ಘಾನಾ
3. ಚಿಲಿ 4. ಜಿಂಬಾಬ್ವೆ

ವಿವರಣೆ: ಭಾರತದಲ್ಲಿ ಬಿಹಾರ್ ರಾಜ್ಯ ಹಾಗೂ ಪ್ರಪಂಚದಲ್ಲಿ ಚಿಲಿದೇಶವು ತಾಮ್ರದ ಉತ್ಪಾದನೆಯಲ್ಲಿ ಪ್ರಥಮ ಸ್ಥಾನದಲ್ಲವೆ.

33. ಸ್ಥಳೀಯ ಸ್ವಯಂ ಸರ್ಕಾರದ ಮುಖ್ಯ ಉದ್ದೇಶವೆಂದರೆ:
1. ಕೃಷಿ ಉತ್ಪಾದನೆ ಹೆಚ್ಚಿಸುವುದು
2. ಪಂಚಾಯಿತು ಆಸ್ತಿಯನ್ನು ರಕ್ಷಿಸುವುದು
3. ಅಧಿಕಾರದ ವಿಕೇಂದ್ರೀಕರಣದ ಮೂಲಕ ಪರಿಣಾಮಕಾರೀ ಆಡಳಿತ ನಡಸುವುದು
4. ಉದ್ಯೋಗ ಸೃಷ್ಟಿಸುವುದು

34. ಮುಖ್ಯ ಚುನಾವಣಾ ಆಯುಕ್ತರು:
1. ರಾಷ್ಟ್ರಪತಿಗಳಿಂದ ನೇಮಕಗೊಳ್ಳುತ್ತಾರೆ
2. ಸಂಸತ್ತಿನಿಂದ ಚುನಾಯಿತರಾಗುತ್ತಾರೆ
3. ಸಂಸದೀಯ ಮಂತ್ರಿಗಳಿಂದ ನೇಮಕಗೊಳ್ಳುತ್ತಾರೆ
4. ಪ್ರಧಾನಮಂತ್ರಿಯವರಿಂದ ನಾಮನಿರ್ದೇಶನಗೊಳ್ಳುತ್ತಾರೆ

ವಿವರಣೆ: ಭಾರತದ ಮುಖ್ಯ ಚುನಾವಣಾ ಆಯುಕ್ತರನ್ನು ರಾಷ್ಟ್ರಪತಿಗಳು ನೇಮಿಸುವರು. ಅವರ ಅಧಿಕಾರವಧಿಯು 65 ವರ್ಷ ತನಕ ಅಥವಾ 6 ವರ್ಷಗಳಾಗಿರುತ್ತದೆ.

35. ಭಾರತ ಸಂವಿಧಾನದಲ್ಲಿ ರಾಜ್ಯ ನಿರ್ದೇಶನ ತತ್ವಗಳನ್ನು ಸೇರಿಸಿರುವುದರ ಮುಖ್ಯ ಉದ್ದೇಶ:
1. ಅಭಿವೃದ್ಧಿಗೆ ಉತ್ತಮ ಅವಕಾಶ ಒದಗಿಸುವುದು
2. ಸುಖೀ ರಾಜ್ಯದ ನಿರ್ಮಾಣ
3. ಸರ್ಕಾರದ ಅನಿಯಂತ್ರಿತ ಕ್ರಮಗಳನ್ನು ತಡೆಗಟ್ಟುವುದು
4. ಜಾತ್ಯಾತೀತ ರಾಜ್ಯದ ನಿರ್ಮಾಣ

ವಿವರಣೆ: ರಾಜ್ಯ ನೀತಿ ನಿರ್ದೇಶಕ ತತ್ವಗಳನ್ನು ಸಂವಿಧಾನದ ಭಾಗ IV 36ನೇ ವಿಧಿಯಿಂದ 51ನೇ ವಿಧಿಯ ವರೆಗೆ ವಿವರಿಸಲಾಗಿದೆ.

36. ಭಾರತದ ಸುಪ್ರೀಂಕೋರ್ಟ್ ರಚಿತವಾದುದು:
1. 1951ರ ಸಂಸತ್ತಿನ ವಿಧಿಯಂತೆ
2. 1951ರ ರಾಷ್ಟ್ರಪತಿಯವರ ಆಜ್ಞೆಯ ಮೂಲಕ
3. ಸಂವಿಧಾನದ ಮೂಲಕ ರಚಿತವಾದುದು
4. 1947ರ ಭಾರತದ ಸ್ವಾತಂತ್ರ ವಿಧಿಯ ಪ್ರಕಾರ

ವಿವರಣೆ: ಭಾರತದ ಸರ್ವೋಚ್ಚ ನ್ಯಾಯಾಲವು ಜನವರಿ 28, 1950ರಂದು ಕಾರ್ಯ ನಿರ್ವಹಿಸಲು ಪ್ರಾರಂಭಿಸಿತು. ಇದರ ಕೇಂದ್ರ ಕಛೇರಿ ನವದೆಹಲಿಯಲ್ಲಿದೆ. 4ನೇ ಭಾಗದಲ್ಲಿ ವಿಧಿ 124ರಿಂದ 147ರವರೆಗೆ ವಿವರಿಸಲಾಗಿದೆ.

37. ಸಾರ್ವತ್ರಿಕ ವಯಸ್ಕ ಮತದಾನವು ಈ ತತ್ವವನ್ನಾಧರಿಸಿದೆ:
1. ಸಮಾನತೆ 2. ಸ್ವಾತಂತ್ರ್ಯ
3. ಸಾರ್ವಭೌಮತ್ವ 4. ಸಮಾಜವಾದ

ವಿವರಣೆ: ಸಾರ್ವತ್ರಿಕ ವಯಸ್ಕ ವಂತದಾನವು ಸಮಾಜವಾದ ತತ್ವವನ್ನಾಧರಿಸಿದೆ. ಭಾರತದ ಪ್ರತಿನಿಧಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿದ್ದು ಚುನಾವಣೆಗಳು ಮಹತ್ತರ ಪಾತ್ರವಹಿಸುತ್ತವೆ.

38. ರಾಜ್ಯಸಭೆಯ ಛೇರ್‌ಮನ್ ಇವರಾಗಿರುತ್ತಾರೆ:
1. ರಾಷ್ಟ್ರಪತಿ 2. ಗೃಹಮಂತ್ರಿ
3. ಪ್ರಧಾನಮಂತ್ರಿ 4. ಉಪರಾಷ್ಟ್ರಪತಿಗಳು

ವಿವರಣೆ: ಭಾರತದ ಉಪರಾಷ್ಟ್ರಪತಿಯವರು ಪದ ನಿಮಿತ್ತ ರಾಜ್ಯ ಸಭೆಯ (ವಿಧಿ89(1)) ಅಧ್ಯಕ್ಷರಾಗಿರುತ್ತಾರೆ.

25) 1 26) 3 27) 2 28) 4 29) 1 30) 2 31) 2 32) 3 33) 3
34) 1 35) 2 36) 3 37) 1 38) 4

pramod@



Scanned with CamScanner

39. ಭಾರತದ ರಾಷ್ಟ್ರಪತಿಗಳು ಚುನಾಯಿತರಾಗುವುದು:
1. ರಾಜ್ಯಸಭೆಯ ಚುನಾಯಿತ ಪ್ರತಿನಿಧಿಗಳಿಂದ
2. ಲೋಕಸಭೆಯ ಚುನಾಯಿತ ಪ್ರತಿನಿಧಿಗಳಿಂದ
3. ರಾಜ್ಯ ವಿಧಾನಸಭೆಯ ಚುನಾಯಿತ ಪ್ರತಿನಿಧಿಗಳಿಂದ
4. ಸಂಸತ್ತಿನ ಮತ್ತು ಎಲ್ಲಾ ರಾಜ್ಯ ವಿಧಾನಸಭೆಯ ಚುನಾಯಿತ ಸದಸ್ಯರುಗಳಿಂದ

ವಿವರಣೆ: ಭಾರತದ ಉಪರಾಷ್ಟ್ರಪತಿಗಳು 2 ಸದನಗಳ ಚುನಾಯಿತ ಪ್ರತಿನಿಧಿಗಳಿಂದ ಚುನಾಯಿಸಲ್ಪಡುತ್ತಾರೆ. ವಿಧಿ 54 ರಾಷ್ಟ್ರಪತಿ ಚುನಾವಣೆಯ ಬಗ್ಗೆ ವಿವರಿಸುತ್ತದೆ.

40. ನಮ್ಮ ಸಂವಿಧಾನದ ಪ್ರಸ್ತಾವನೆಯಲ್ಲಿ ಭಾರತದ ಬಗ್ಗೆ ಹೇಳಿರುವುದು:
1. ಸಾರ್ವಭೌಮ, ಸಮಾಜವಾದ, ಜಾತ್ಯಾತೀತ, ಪ್ರಜಾಪ್ರಭುತ್ವ ಗಣತಂತ್ರ
2. ಪ್ರಜಾಪ್ರಭುತ್ವ, ಸಾರ್ವಭೌಮ, ಜಾತ್ಯಾತೀತ, ಸಮಾಜವಾದೀ ಗಣತಂತ್ರ
3. ಸಾರ್ವಭೌಮ, ಪ್ರಜಾಪ್ರಭುತ್ವ, ಜಾತ್ಯಾತೀತ, ಗಣತಂತ್ರ
4. ಸಾರ್ವಭೌಮ, ಪ್ರಜಾಪ್ರಭುತ್ವ, ಸಮಾಜವಾದ, ಜಾತ್ಯಾತೀತ, ಗಣತಂತ್ರ

ವಿವರಣೆ: ಭಾರತದ ಸಂವಿಧಾನ ರಚನಾ ಸಭೆಯಿಂದ ಅಂಗೀಕಾರವಾದ ಭಾರತದ ಪ್ರಸ್ತಾವನೆಯು ಸಂವಿಧಾನದ ಒಂದು ಅವಿಭಾಜ್ಯ ಭಾಗವಾಗಿದೆ. ಪ್ರಸ್ತಾವನೆಯು ಸಾರ್ವಭೌಮ, ಸಮಾಜವಾದಿ, ಜಾತ್ಯಾತೀತ, ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ ವ್ಯವಸ್ಥೆಗೊಳಿಸಲಾಗಿದೆ.

pramod@

41. "ಇತಿಹಾಸವು ವೈಜ್ಞಾನಿಕ ಅಧ್ಯಯನ ಮತ್ತು ಗತಕಾಲದ ಸಂಪೂರ್ಣ ದಾಖಲೆ" ಎಂದವರು:
1. ಫ್ರೋಷ್ 2. ಹೆಗಲ್
3. ಜಾನ್ಸನ್ 4. ಮೈಟ್‌ಲ್ಯಾಂಡ್

42. ಕಾಲ, ಸ್ಥಳ ಮತ್ತು ಸಮಾಜದ ಪ್ರಜ್ಞೆಯನ್ನು ಮೂಡಿಸುವ ವಿಷಯ:
1. ರಾಜ್ಯಶಾಸ್ತ್ರ 2. ಭೂಗೋಳಶಾಸ್ತ್ರ
3. ಇತಿಹಾಸ 4. ಅರ್ಥಶಾಸ್ತ್ರ

43. ಘಟನೆಗಳು ಮತ್ತು ವರ್ಷವನ್ನು ಪ್ರಸ್ತುತದಿಂದ ಹಿಂದಕ್ಕೆ ಕ್ರಮಾನುಗತವಾಗಿ ಪ್ರತಿನಿಧಿಸುವ ಕಾಲರೇಖೆ:
1. ಪ್ರತಿಗಾಮಿ ಕಾಲರೇಖೆ 2. ಪ್ರಗತಿಗಾಮಿ ಕಾಲರೇಖೆ
3. ಯೋಲಿಕಾತ್ಮಕ ಕಾಲರೇಖೆ
4. ಚಿತ್ರಾತ್ಮಕ ಕಾಲರೇಖೆ

44. "ಹೋಲಿಸುವನು ಮತ್ತು ವ್ಯತ್ಯಾಸಿಸುವನು" ಎಂಬ ನಿರ್ದಿಷ್ಟಕವು ಕಂಡುಬರುವ ಬೋಧನಾ ಉದ್ದೇಶ:
1. ತಿಳುವಳಿಕೆ 2. ಜ್ಞಾನ
3. ಕೌಶಲ 4. ವಿಮರ್ಶಾತ್ಮಕ ಚಿಂತನೆ

45. "ರಾಷ್ಟ್ರೀಯ ಭಾವೈಕ್ಯತೆ" ಯನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಲು ಸಹಾಯಕವಾಗುವ ವಿಷಯ:
1. ಅರ್ಥಶಾಸ್ತ್ರ 2. ಇತಿಹಾಸ
3. ಭೂಗೋಳಶಾಸ್ತ್ರ 4. ಸಮಾಜಶಾಸ್ತ್ರ

46. ಯೋಜನಾ ವಿಧಾನದ ಕಡೆಯ ಹಂತವೆಂದರೆ:
1. ಯೋಜನೆಯನ್ನು ದಾಖಲಿಸುವುದು
2. ಕಾರ್ಯ ನಿರ್ವಹಣೆ
3. ಯೋಜನೆ
4. ಸನ್ನಿವೇಶವನ್ನು ಒದಗಿಸುವುದು

47. ಸಮಸ್ಯಾ ಪರಿಹಾರ ವಿಧಾನದ ಮೊದಲ ಹಂತವೆಂದರೆ:
1. ಸೂಕ್ತ ಮಾಹಿತಿ ಸಂಗ್ರಹಣೆ
2. ನಿರ್ಣಯಗಳ ಪರೀಕ್ಷಣೆ
3. ನಿರ್ಣಯ ತೆಗೆದುಕೊಳ್ಳುವುದು
4. ಸಮಸ್ಯೆಯನ್ನು ಗುರುತಿಸುವುದು

48. ಯೋಜನಾ ವಿಧಾನವನ್ನು ಅಭಿವೃದ್ಧಿಪಡಿಸಿ ಮತ್ತು ಪರಿಪೂರ್ಣಗೊಳಿಸಿದವರು:
1. ಜಾನ್‌ಡ್ಯೂಯಿ 2. ಕಿಲ್‌ಪ್ಯಾಟ್ರಿಕ್
3. ಬಲ್ಲಾರ್ಡ್ 4. ಬರ್ಟನ್

49. ತಮ್ಮ ಸ್ಥಳ, ಪರ್ವತಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಗೌರವವನ್ನು ವೃದ್ಧಿಸಲು ಸಹಾಯ ಮಾಡುವ ಭೂಗೋಳಶಾಸ್ತ್ರದ ಬೋಧನಾ ವಿಧಾನ:
1. ಏಕಕೇಂದ್ರ ವಿಧಾನ 2. ಮೂಲಾಧಾರ ವಿಧಾನ
3. ಪ್ರಾಂತೀಯ ವಿಧಾನ 4. ಯೋಜನಾ ವಿಧಾನ

50. ಕಲಿಕಾರ್ಥಿ ಮತ್ತು ಬಾಹ್ಯಸ್ಥಿತಿಯ ನಡುವಿನ ಪ್ರತಿಕ್ರಿಯಾತ್ಮಕ ಪರಿಸರವನ್ನು ಹೀಗೆಂದು ಕರೆಯಬಹುದು:
1. ಕಲಿಕಾ ತಂತ್ರಗಳು 2. ಕಲಿವಿನ ಅನುಭವಗಳು
3. ಕಲಿಕಾ ಸಾಮಗ್ರಿಗಳು 4. ಕಲಿಕಾ ವಿಧಾನಗಳು

51. ಪ್ರಕ್ಷೇಪಿತ ಸಲಕರಣೆಗಳಿಗೆ ಉದಾಹರಣೆ:
1. ಮಿಂಚುಪಟ್ಟಿ 2. ತೂಗಲುಗೊಂಬೆ
3. ಪಟ 4. ಸ್ಲೈಡ್

52. ಇತ್ತೀಚಿನ ವಿದ್ಯಮಾನಗಳನ್ನು ಪ್ರದರ್ಶಿಸಲು ಬಳಸುವ ಸಾಧನ:
1. ಕಪ್ಪು ಹಲಗೆ
2. ಬುಲೆಟಿನ್ ಬೋರ್ಡ್/ವಾರ್ತಾಫಲಕ
3. ಫ್ಲಾನಲ್ ಬೋರ್ಡ್ 4. ಹಸಿರು ಹಲಗೆ

53. ಸಮಾಜ ವಿಜ್ಞಾನ ವಿಷಯವನ್ನು ನಿರಂತರ ವೃತ್ತವಾಗಿ ವ್ಯವಸ್ಥೆಗೊಳಿಸುವ ವ್ಯವಸ್ಥೆ
1. ಸಂಯೋಜಿತ ಮಾರ್ಗ 2. ಘಟಕ ಮಾರ್ಗ
3. ಏಕಕೇಂದ್ರಿತ ಮಾರ್ಗ 4. ಜೀವನ ವೃತ್ತಾಂತ ಮಾರ್ಗ

54. ಸಂಘಟಿತ ತೀರ್ಮಾನ ತೆಗೆದುಕೊಳ್ಳಲು ಸೂಕ್ತ ವಿಧಾನವೆಂದರೆ:
1. ಪಾತ್ರಾಭಿನಯ 2. ವೀಕ್ಷಣಾ ವಿಧಾನ
3. ಮೂಲಾಧಾತರ ವಿಧಾನ
4. ಚರ್ಚಾ ವಿಧಾನ

55. ಮೂರು ಆಯಾಮಗಳ ಬೋಧನಾ ಸಲಕರಣೆಗೆ ಉದಾಹರಣೆ:
1. ಮಾದರಿ 2. ಪಟ
3. ಭೂಪಟ 4. ಚಿತ್ರ

56. ವಿದ್ಯಾರ್ಥಿಯಲ್ಲಿ 'ಸ್ಥಳದ ಸಂಬಂಧ" ವನ್ನು ವೃದ್ಧಿಗೊಳಿಸಲು ಸಹಾಯ ಮಡುವ ಸಾಧನವೆಂದರೆ:
1. ಪಟಗಳು 2. ಭೂಪಟಗಳು
3. ಕಾರ್ಟೂನ್‌ಗಳು 4. ಗ್ರಾಫ್‌ಗಳು

57. ವಿದ್ಯಾರ್ಥಿಗಳಲ್ಲಿ ಕಾಲ ಮತ್ತು ಸ್ಥಳದ ಬಗ್ಗೆ ಪ್ರಜ್ಞೆಯನ್ನು ವೃದ್ಧಿಸಲು ಇತಿಹಾಸವನ್ನು ಈ ವಿಷಯದೊಂದಿಗೆ ಸಹಸಂಬಂಧೀಕರಿಸಬೇಕು:
1. ಭೂಗೋಳಶಾಸ್ತ್ರ 2. ಅರ್ಥಶಾಸ್ತ್ರ
3. ಸಮಾಜಶಾಸ್ತ್ರ 4. ರಾಜ್ಯಶಾಸ್ತ್ರ

| | | | | | | | | |
|---|---|---|---|---|---|---|---|---|
| 39) 4 | 40) 1 | 41) 1 | 42) 3 | 43) 1 | 44) 1 | 45) 2 | 46) 1 | 47) 4 |
| 48) 2 | 49) 3 | 50) 2 | 51) 4 | 52) 2 | 53) 2 | 54) 4 | 55) 1 | 56) 2 |
| 57) 1 | | | | | | | | |



Scanned with CamScanner

58. **ವಿದ್ಯಾರ್ಥಿಗಳಲ್ಲಿ ಕಲಿಕೆಯ ಮಟ್ಟವನ್ನು ಅಳೆಯುವ ಪರೀಕ್ಷಣವೆಂದರೆ:**
1. ಆದರ್ಶೀಕೃತ ಪರೀಕ್ಷೆ 2. ಮೌಖಿಕ ಪರೀಕ್ಷೆ
3. ಸಾಧನಾ ಪರೀಕ್ಷೆ 4. ಪ್ರಾವೀಣ್ಯತಾ ಪರೀಕ್ಷೆ

59. **ಕಲಿಕಾರ್ಥಿಯಲ್ಲಿ ಕಲಿಕೆಯ ಕೊರತೆ ಮತ್ತು ಸಮಸ್ಯೆಗಳನ್ನು ಪತ್ತೆಹಚ್ಚಲು ಸಹಾಯ ಮಾಡುವ ಪರೀಕ್ಷಣ:**
1. ಸಂಕಲನಾತ್ಮಕ ಪರೀಕ್ಷೆ 2. ಸಾಧನಾ ಪರೀಕ್ಷೆ
3. ನೈದಾನಿಕ ಪರೀಕ್ಷೆ 4. ರೂಪಣಾತ್ಮಕ ಪರೀಕ್ಷೆ

60. **ಸ್ಪರ್ಧಾತ್ಮಕ ಸಹಕಾರ, ಒಪ್ಪಂದ ಮತ್ತು ನಿರ್ದೇಶಿತ ಉದ್ದೇಶಗಳನ್ನು ಹೊಂದಿರುವ ಬೋಧನಾ ವಿಧಾನ:**
1. ಸಮಸ್ಯಾ ಪರಿಹಾರ ವಿಧಾನ
2. ಕಥೆ ಹೇಳುವ ವಿಧಾನ
3. ಉಪನ್ಯಾಸ ವಿಧಾನ
4. ಚರ್ಚಾ ವಿಧಾನ

### ಭಾಗ– 1

**ಸೂಚನೆ:** ಈ ಕೆಳಗಿನ ಗದ್ಯಭಾಗವನ್ನು ಓದಿ ಕೊಟ್ಟಿರುವ 1 ರಿಂದ 8 ಪ್ರಶ್ನೆಗಳಿಗೆ ಉತ್ತರಿಸಿರಿ:

ಬಾಲ್ಯದಲ್ಲಿ 'ನಾಣು' ಎಂದೇ ಪ್ರೀತಿಯಿಂದ ಕರೆಯಲ್ಪಡುತ್ತಿದ ನಾರಾಯಣ ಗುರುಗಳ ತಂದೆ ಮಾಡಾನ್ ಆಶಾನ್ ಹಾಗೂ ತಾಯಿ ಕುಟ್ಟಿಯಮ್ಮ, ಅದೊಂದು ಮಧ್ಯಮ ವರ್ಗದ ಮನೆತನ. ಆಯುರ್ವೇದ ವೈದ್ಯರಾದ ಮಾಡಾನ್ ಆಶಾನ್ ಸಂಸ್ಕೃತ, ತಮಿಳು, ಮಲಯಾಳಂ ಭಾಷೆಗಳನ್ನು ತಿಳಿದ ಉಪಾಧ್ಯಾಯರು. ಧರ್ಮಭೀರು ದಂಪತಿಗಳಾದ ಇವರು ಊರಿನ ಎಲ್ಲರಿಗೂ ಬೇಕಾದವರಾಗಿದ್ದರು. ಚಂಬಳಂತಿಯ "ಶ್ರೀಭದ್ರಾ" ಗುಡಿಯ ಬಳಿ ವಾಸವಾಗಿದ್ದ "ವಯಲ್ವಾರಂ" ಮನೆತನಕ್ಕೆ ಸೇರಿದ ನಾಣುವಿನ ಹಿರಿಯರು ಸತ್ಯವಂತರೂ, ಸಾತ್ವಿಕರೂ ಆಗಿದ್ದು ಜಾತಿಯಲ್ಲಿ ಈಳವರಾಗಿದ್ದರೂ ನೀತಿಯಲ್ಲಿ ನೂಲಹಾಕದ ಬ್ರಾಹ್ಮಣನಂತೆ ಸಂಸ್ಕಾರಯುಕ್ತ ಜೀವನ ನಡೆಸಿದವರು. ನಾಣುವಿಗೆ ರಾಮನ್ ವೈದ್ಯರ್ ಮತ್ತು ಕೃಷ್ಣನ್ ವೈದ್ಯರ್ ಎಂಬ ಸೋದರ ಮಾವಂದಿರು. ಕೃಷ್ಣನ್ ವೈದ್ಯರ್ ವೈದ್ಯಶಾಸ್ತ್ರದಲ್ಲಿ ಮುಖ್ಯವಾಗಿ ನಾಟಿವೈದ್ಯದಲ್ಲಿ ಹೆಚ್ಚಿನ ಪಾಂಡಿತ್ಯವಿದ್ದು ಹಾಗೂ ಅವರು ಜಾತಿ ಮುಂಖಂಡರಾಗಿದ್ದು ತನ್ನ ಆಳಿಯನ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಟ್ಟಿದ್ದರು, ಕುಟ್ಟಿಯಮ್ಮನ ತಂದೆ ತಿರುವಾಂಕೂರು ರಾಜನ ಆಸ್ಥಾನದಲ್ಲಿ ವ್ಯಾಯಮ ಶಿಕ್ಷಕ ಮತ್ತು ಆಕೆಯ ಸೋದರಮಾವ ಬ್ರಹ್ಮಚಾರಿಯಾಗಿದ್ದನು. ಸ್ಫುರದ್ರೂಪಿ, ಆಜಾನುಬಾಹು ಗೌರವವರ್ಣದ ಆ ಬ್ರಹ್ಮಚಾರಿ ಅಜ್ಜನಂತೆಯೇ ನಾಣುವಿನ ರೂಪವಿತ್ತೆಂದು ಹೇಳುವರು. ನಾಣು ಹುಟ್ಟುವ ಎರಡು ವರ್ಷಗಳ ಮೊದಲೇ ಆ ಅಜ್ಜ ತೀರಿಹೋಗಿದ್ದು ಆತನ ಜೀವಿತಾಲದಲ್ಲಿ ಚಂಬಳಂತೆ ಗ್ರಾಮದ ಮಣಿಕಲ್ ಎಂಬಲ್ಲಿ ಭಗವತಿ ಮೂರ್ತಿಯನ್ನು ಪ್ರತಿಷ್ಠಾಪಿನದ ಧಾರ್ಮಿಕ ಹಿನ್ನೆಲೆಯಿದ್ದ ವ್ಯಕ್ತಿಯಾಗಿದ್ದರು. ಇಂತಹ ಸುಸಂಸ್ಕೃತ ಕೌಟುಂಬಿಕರ ಪರಿಸರದಲ್ಲಿ ನಾಣು ತನ್ನ ಬಾಲ್ಯವನ್ನು ಕಳೆದನು.

ಬೆಳೆಯುವ ಗುಣ ಮೊಳಕೆಯಲ್ಲೇ ಪ್ರಕಟವಾಗುವುದಂತೆ, ಅಂತೆಯೇ ಮುಂದೆ ತನ್ನ ಹೊಸ ಚಿಂತನೆಯಿಂದ ಹಿಂದುಳಿದ ಜನಾಂಗದಲ್ಲಿ ಸಾಂಸ್ಕೃತಿಕ ಪುನರುತ್ಥಾನದ ರೂವಾರಿಯಾಗಿ ಮೂಡಬೇಕಾಗಿದ್ದ ನಾರಾಯಣಗುರು ಬಾಲ್ಯದಲ್ಲೇ ಸತ್ಯಸಂಶೋಧಕನ ಲಕ್ಷಣ ಹಾಗೂ ಚಿಂತನಾಶೀಲ ಪ್ರವೃತ್ತಿ ಪ್ರಕಟಪಡಿಸುತ್ತಿದ್ದರು. ತನಗೆ ಕೊಟ್ಟ ಅರವಿಪುರಂ ಕ್ಷೇತ್ರವನ್ನು ಒಂದು ಸುವ್ಯವಸ್ಥಿತ ಆಡಳಿತಕ್ಕೊಳಪಡಿಸಿದ ನಂತರ ನಾರಾಯಣಗುರು ಕೇರಳದ ವರ್ಕಲದಲ್ಲಿ ಶಿವಗಿರಿ ಎಂಬ ರಮಣೀಯವಾದ ಬೆಟ್ಟದಲ್ಲಿ ವಾಸಿಸಿ ಅದನ್ನು ತನ್ನ ಆಶ್ರಮಕ್ಕಾಗಿ ಆರಿಸಿಕೊಂಡರು. ಮಹಾತ್ಮಾ ಗಾಂಧಿಯವರಿಗಿಂತಲೂ ಮೊದಲು ನಾರಾಯಣ ಗುರುಗಳು ಮದ್ಯವರ್ಜನೆ, ಅಸ್ಪೃಶ್ಯ ನಿವಾರಣೆ, ಪ್ರಾಣಿಬಲಿ ನಿಷೇಧಗಳು ಸಾಮಾಜಸುಧಾರಣೆಗೆ ಅಗತ್ಯವೆಂದು ಮನಗಂಡು, ಈ ದಿಶೆಯಲ್ಲಿ ಕಾರ್ಯ ಪ್ರವೃತ್ತರಾಗಲು ಶಿವಗಿರಿಯನ್ನು ಕೇಂದ್ರವಾಗಿರಿಸಿಕೊಂಡರು.

61. **ನಾರಾಯಣ ಗುರುಗಳ ತಂದೆ ನಿರ್ವಹಿಸುತ್ತಿದ್ದ ವೃತ್ತಿ:**
1. ಸಂಸ್ಕೃತ ಶಿಕ್ಷಕ 2. ಆಯುರ್ವೇದ ವೈದ್ಯ
3. ಅಲೋಪತಿ ವೈದ್ಯ 4. ಹೋಮಿಯೋಪತಿ ವೈದ್ಯ

62. **ನಾರಾಯಣ ಗುರುಗಳನ್ನು ಪ್ರೀತಿಯಿಂದ ಕರೆಯುತ್ತಿದ್ದ ಹೆಸರು:**
1. ನಾಣು 2. ಆಶಾನ್
3. ಮಾಡನ್ 4. ಕುಟ್ಟಿ

63. **ಮಹರ್ಷಿ ನಾರಾಯಣ ಗುರುಗಳ ಪೂರ್ವಜರು ಸೇರಿರುವ ಮನೆತನ:**
1. ಚಂಬಳಂತಿ 2. ಶ್ರೀಭದ್ರಾ
3. ವಯಲ್ವಾರಂ 4. ಸಂಸ್ಕಾರ ಸಿದ್ಧಿ

64. **ಕೃಷ್ಣನ್ ವೈದ್ಯರ್ ಮುಖ್ಯವಾಗಿ ಪಡೆದಿರುವ ಪಾಂಡಿತ್ಯ:**
1. ವೇದಶಾಸ್ತ್ರದಲ್ಲಿ 2. ತತ್ವ ಶಾಸ್ತ್ರದಲ್ಲಿ
3. ವೈದ್ಯ ಶಾಸ್ತ್ರದಲ್ಲಿ 4. ನಾಟಿ ವೈದ್ಯದಲ್ಲಿ

65. **ಮಹರ್ಷಿ ನಾರಾಯಣ ಗುರುಗಳ ಅಜ್ಜ ತಿರುವಾಂಕೂರು ರಾಜನ ಆಸ್ಥಾನದಲ್ಲಿ ನಿರ್ವಹಿಸುತ್ತಿದ್ದ ವೃತ್ತಿ:**
1. ತತ್ವಶಾಸ್ತ್ರ ಶಿಕ್ಷಕ 2. ಮನೋಶಾಸ್ತ್ರ ಶಿಕ್ಷಕ
3. ವೈದ್ಯ ಶಾಸ್ತ್ರದಲ್ಲಿ 4. ಮಲಯಾಳಂ ಶಿಕ್ಷಕ

66. **ಮಹಾತ್ಮಾಗಾಂಧೀಜಿಯವರಿಗಿಂತ ಮೊದಲು ಅಸ್ಪೃಶ್ಯತೆಯ ನಿವಾರಣೆಗೆ ಪ್ರಯತ್ನ ಪಟ್ಟವರು:**
1. ನಾರಾಯಣ ಗುರು 2. ನಾರಾಯಣ ವೈದ್ಯ
3. ಕುಮಾರಾನ್ ಆಶಾನ್
4. ಜೈ ಆಕಾಶ್ ನಾರಾಯಣನ್

67. **"ವಿದ್ಯಾಭ್ಯಾಸ"ವನ್ನು ಬಿಡಿಸಿ ಸಂಧಿಕಾರ್ಯ ಮತ್ತು ಸಂಧಿಸ್ವರವನ್ನು ನೋಡಿದಾಗ ಬರುವ ಸಂಧಿ:**
1. ಗುಣ ಸಂಧಿ 2. ಯಣ್ ಸಂಧಿ
3. ಸವರ್ಣದೀರ್ಘ ಸಂಧಿ 4. ಅನ್ವರ್ಥನಾಮ

68. **'ವಿದ್ವಾಂಸ' ಎಂಬ ಪದವು ಒಳಗೊಂಡಿರುವ ವ್ಯಾಕಾರದಣ ಭಾಗ?**
1. ಅಂಕಿತನಾಮ 2. ರೂಢನಾಮ
3. ಸರ್ವನಾಮ 4. ಅನ್ವರ್ಥನಾಮ

**ಸೂಚನೆ: ಈ ಕೆಳಗೆ ಕೊಟ್ಟಿರುವ ಪದ್ಯಭಾಗವನ್ನು ಓದಿಕೊಂಡು 69 ರಿಂದ 75ರ ವರೆಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.**

ಸೀರಿ ಉಟ್ಟು, ಬಳೆತೊಟ್ಟು, ಕಾಲಿಗೆ
ಗೆಜ್ಜೆ ಕಟ್ಟಿದ್ದಾನೆ ಒಬ್ಬ;
ಇನ್ನೊಬ್ಬ ಕಾವಿ ಉಟ್ಟು ಮೂಲೆಗೆ ಕೂತಿದ್ದಾನೆ.
ದನದ ಕೊಟ್ಟಿಗೆಯಲ್ಲಿ ಒಬ್ಬ, ಕುದುರೆ ಲಾಯದಲ್ಲಿ ಮತ್ತೊಬ್ಬ;
ಇದ್ದಾಳೆ ಇವಳು ಅವರಿವರ ತಲೆಯ ಹೇನು ಹೆಕ್ಕುತ್ತಾ
ಆಗಾಗ ನಮ್ಮನ್ನೂ ಕುಕ್ಕುತ್ತಾ.

ನಾನೂ ಇದ್ದೇನೆ– ಅಡುಗೆ ಮನೆಯಲ್ಲಿ
ಉರಿವ ಸೌದೆಗಳ ಜೊತೆಗೆ
ಪಾತ್ರೆಗಳಲ್ಲಿ ಕೊತ ಕೊತ ಕುದಿದು
ಹಳೆಯ ನೆನಪುಗಳನ್ನು ರುಬ್ಬುತ್ತಾ;

ಕಣ್ಣೆದುರು ತೇಲಿಬರುತ್ತವೆ;
ಕಂಡದ್ದು, ಕಲಿತದ್ದು; ಬೆಂಕಿಗೆ ಬಿದ್ದು ಪಾರಾದದ್ದು;
ಪಗಡೆ ದಳದ ಜೊತೆಗೆ ಉರುಳಿ ಬಿದ್ದದ್ದು; ಬಿಚ್ಚಿದ
ಜಡೆಯ ನೆರಳಿನ ಕೆಳಗೆ ಭುಸುಗುಟ್ಟಿ ನರಳಿದ್ದು;

58) 3 59) 3 60) 4 61) 2 62) 1 63) 3 64) 4 65) 3 66) 1
67) 3 68) 4



Scanned with CamScanner

ಕಾಡು ಪಾಲಾಗಿ ಅಲೆದದ್ದು.

69. ಸೀರೆ ಉಟ್ಟು, ಬಳೆತೊಟ್ಟು, ಕಾಲಿಗೆ ಗೆಜ್ಜೆ ಕಟ್ಟಿಕೊಂಡಿರುವವರು:
1. ದುಶ್ಶಾಸನ 2. ಅರ್ಜುನ
3. ಶಕುನಿ 4. ಭೀಮ

70. ಕಾವಿಯನ್ನು ತೊಟ್ಟು ಮೂಲೆಯಲ್ಲಿ ಕುಳಿತುಕೊಂಡಿರುವವರು:
1. ವಿಶ್ವವಿಜಯ 2. ವಸಿಷ್ಠ
3. ನೀಲಾಂಬಿಕೆ 4. ಧರ್ಮರಾಯ

71. ದನದ ಕೊಟ್ಟಿಗೆಯಲ್ಲಿ ಇರುವವರು:
1. ದುರ್ಯೋಧನ 2. ಭೀಮ
3. ನಕುಲ 4. ಜನಮೇಜಯ

72. ಪ್ರತಿಯೊಬ್ಬರನ್ನು ಎಚ್ಚರಿಸುತ್ತಾ ತಲೆಯ ಹೇನನ್ನು ಕುಕ್ಕುತ್ತಾ ಇದ್ದವರು:
1. ಸಂಯಾತಿ 2. ದ್ರೌಪದಿ
3. ಋತ್ವಿಕಾ 4. ವಿವಿಂಶತಿ

73. ಹಳೆಯ ನೆನಪುಗಳನ್ನು ನೆನೆಯುತ್ತಾ ಪಾತ್ರೆಯಲ್ಲಿ ಕುದಿಯುತ್ತಿದ್ದಾನೆ, ಅಡುಗೆ ಮನೆಯಲ್ಲಿ ಸೌದೆಗಳ ಜೊತೆಗೆ:
1. ದುಯೋಧನ 2. ಭೀಮ
3. ಜನಮೇಜಯ 4. ಅರ್ಜುನ

74. "ಕಣ್ಣೆದುರು" ಎಂಬ ಪದವನ್ನು ಬಿಡಿಸಿ ಸಂಧಿಕಾರ್ಯ ಮತ್ತು ಸಂಧಿಸ್ವರವನ್ನು ನೋಡಿದಾಗ ಬರುವ ಸಂಧಿ:
1. ಗುಣ ಸಂಧಿ 2. ವೃದ್ಧಿ ಸಂಧಿ
3. ಯಣ್ ಸಂಧಿ 4. ಲೋಪ ಸಂಧಿ

75. "ರಾಕ್ಷಸ" ಎಂಬ ಪದದ ತದ್ಭವ ರೂಪ:
1. ರಕ್ಕಸ 2. ರಕ್ಕಿಣಿ
3. ರಾಕ್ಷಸ 4. ರಕಸ

76. "ಮನುಷ್ಯನ ಯೋಚನೆಗಳನ್ನು ಅಭಿವ್ಯಕ್ತಿಗೊಳಿಸುವ ಸಲುವಾಗಿ ಇರುವ ಒಂದು ಶಬ್ದ ಸಂಯೋಜನಾ ಮಾಧ್ಯಮವೇ ಭಾಷೆ":
1. ಆಕ್ಸ್‌ಫರ್ಡ್ ನಿಘಂಟು 2. ಕೇಂಬ್ರಿಡ್ಜ್ ನಿಘಂಟು
3. ರ್‍ಯಾಡಂಮ್ ಹೌಸ್ ನಿಘಂಟು
4. ಜರ್ಮನ್–ಕನ್ನಡ ನಿಘಂಟು

77. ಶ್ರಮ ಪರಿಹಾರ ಸಿದ್ಧಾಂತದ ಪ್ರತಿಪಾದಕರು:
1. ಬ್ಲಾಕ್ ಮತ್ತು ಟ್ರೇಗರ್ 2. ನೊಯಿರಿ
3. ಎಬ್ಬಿಂಗ್ ಹೌಸ್ 4. ರಾಯ್

78. ಆಲಿಸುವಿಕೆಯನ್ನು ಉತ್ತಮ ಪಡಿಸುವ ಪ್ರಮುಖ ಅಂಶಗಳು:
1. ಆಸಕ್ತಿಯಿಂದ, ವಸ್ತುನಿಷ್ಠತೆಯಿಂದ, ಹೇಳುವವರನ್ನು ನೋಡುತ್ತ ಗ್ರಹಿಸುವುದು
2. ಆಲಿಸುತ್ತಾ ಉದ್ದೇಶಪೂರ್ವಕವಲ್ಲದೆ ಗ್ರಹಿಸುವುದು
3. ಸಹಜವಾಗಿ, ನಿರಂತರವಾಗಿ ಆಲಿಸದೆ ಗ್ರಹಿಸುವುದು
4. ಪೂರ್ವಗ್ರಹದಿಂದ, ಮುಕ್ತಮನಸ್ಸಿಲ್ಲದೆ ಗ್ರಹಿಸುವುದು

79. ಅನುಗಮನ ಪದ್ಧತಿಯ ಪ್ರತಿಪಾದಕರು:
1. ಮ್ಯಾಕ್ಸ್‌ಮುಲ್ಲರ್ 2. ಪ್ಲೇಟೋ
3. ಫ್ರಾನ್ಸಿಸ್ ಬೇಕನ್ 4. ಹೂಮನ್ ಸ್ಪೀಚ್

80. ವಿದ್ಯಾರ್ಥಿಯಲ್ಲಿ ಕಂಡುಬರುವ ಉತ್ತಮ ಮಾತುಗಾರಿಕೆಯ ಲಕ್ಷಣ:
1. ಉದ್ದೇಶಪೂರ್ವಕವಾಗಿ, ಮಾನಸಿಕ ಸಿದ್ಧತೆಯಿಂದ ಸರಳವಾಗಿ, ಅರ್ಥಬದ್ಧವಾಗಿ, ವ್ಯಾಕರಣಬದ್ಧವಾಗಿ ಮಾತನಾಡುವುದು
2. ಮಾತಿನಲ್ಲಿ ಹಿಮ್ಮರಳುವಿಕೆ ಮತ್ತು ಅತಿಯಾದ ಪುನರಾವರ್ತನೆ ಇರುವುದು
3. ಹೇಳುವವರನ್ನು ನೋಡಿಕೊಂಡು ಪದಗಳನ್ನು ನುಂಗುತ್ತಾ ಸುತ್ತಿ ಬಳಸಿ ಮಾತನಾಡುವುದು
4. ಗಾಬರಿಯಿಂದ, ಆತುರದಿಂದ ಅಸಹಜವಾಗಿ ಅಪೂರ್ಣ ವಾಕ್ಯಗಳ ಮೂಲಕ ಮಾತನಾಡುವುದು

81. ಎಂಟನೆಯ ತರಗತಿಯ "ಬಿ" ವಿಭಾಗದ ವಿದ್ಯಾರ್ಥಿಗಳಿಗೆ ಶಿಕ್ಷಕರು ಆಶುಭಾಷಣ, ಏಕಪಾತ್ರಾಭಿನಯ, ಚರ್ಚಾಸ್ಪರ್ಧೆಗಳನ್ನು ಏರ್ಪಡಿಸುವುದರ ಉದ್ದೇಶ:
1. ಉತ್ತಮ ಓದುಗಾರನನ್ನಾಗಿಸಲು
2. ಉತ್ತಮ ಮಾತುಗಾರನನ್ನಾಗಿಸಲು
3. ಉತ್ತಮ ಬರಹಗಾರನನ್ನಾಗಿಸಲು
4. ಉತ್ತಮ ಆಲಿಸುವಿಕೆಯನ್ನ ಬೆಳೆಸಲು

82. "ಭಾಷೆ" ಎನ್ನುವುದು ಅಭಿಪ್ರಾಯಗಳ ಅಭಿವ್ಯಕ್ತಿಯ ಒಂದು ವಿಧಾನ ಅಲ್ಲ. ಅದೊಂದು ರೀತಿಯ ಆಲೋಚನೆ" ಎಂದು ಹೇಳಿದವರು:
1. ಎರ್ಡಮನ್ 2. ಈಸ್ಲರ್
3. ಜಾಕಬ್ ಕೋರ್ಗ್ 4. ಫರ್ಡಿನೆಂಡ್ ಡಿ.ಸಸೂರ್

83. ಸ್ಥೂಲ– ಸೂಕ್ಷ್ಮ ಗ್ರಹಿಕೆಯೊಂದಿಗೆ ರಸಭಾವಗಳ ಪ್ರಶಂಸೆ ಮತ್ತು ಅಲಂಕಾರ, ಛಂದಸ್ಸನ್ನು ಒಳಗೊಂಡು ಬೋಧನೆ:
1. ಗದ್ಯ ಬೋಧನೆ 2. ಕಾವ್ಯ ಬೋಧನೆ
3. ವ್ಯಾಕರಣ ಬೋಧನೆ 4. ನಾಟಕ ಬೋಧನೆ

84. ಓದಿನಲ್ಲಿ ಹಿಮ್ಮರಳುವಿಕೆ ಉಂಟಾಗಲು ಕಾರಣ:
1. ಪ್ರಸ್ತಾವನೆ, ವಿಷಯ ಮತ್ತು ಉಪಸಂಹಾರ ಎಂಬ ಮೂರು ಭಾಗಗಳನ್ನು ಗುರುತಿಸಿಕೊಂಡು ಓದುವುದು
2. ಓದಿನಲ್ಲಿ ವೇಗ ಪರಿಣಾಮಕಾರಿಯಾಗಿ ಇರುವುದು
3. ಓದುವ ವಸ್ತು ಯಾವುದೇ ಇದ್ದರೂ ತದೇಕಚಿತ್ತದಿಂದ ಗ್ರಹಿಸಿಕೊಂಡು ಓದುವುದು
4. ಅವಧಾನ, ಏಕಾಗ್ರತೆ ಮತ್ತು ಅರ್ಥಗ್ರಹಣ ಇಲ್ಲದಿರುವುದು

85. ವಿದ್ಯಾರ್ಥಿಗಳ ಕಲಿಕೆಯಲ್ಲಿ ಕಂಡುಬರುವ ದೋಷಗಳನ್ನು ನಿವಾರಿಸಲು ಕೈಗೊಳ್ಳುವ ಬೋಧನೆ:
1. ಸೂಕ್ಷ್ಮ ಬೋಧನೆ 2. ಅನುಸರಣ ಬೋಧನೆ
3. ಪರಿಹಾರ ಬೋಧನೆ
4. ವಿಷಯ ಮಾತುಗಾರಿಕೆಯಿಂದ

86. ಅಶೋಕನ ಕಾಲದ ಬ್ರಾಹ್ಮೀಲಿಪಿ, ಕದಂಬರ ಗತವೈಭವ ಮತ್ತು ರಾಮಾಯಣದ ಕಥೆಗಳು ಮೂರ್ತರೂಪದಿಂದ ಶಾಶ್ವತವಾಗಿ ತಿಳಿಯಲ್ಪಟ್ಟಿರುವುದು:
1. ವಿಷಯ ಸಂಗ್ರಹಣೆಯಿಂದ
2. ವಿಷಯ ಬರವಣಿಗೆಯಿಂದ
3. ವಿಷಯ ಓದುಗರಿಕೆಯಿಂದ

pramod@

69) 2 70) 4 71) 3 72) 2 73) 2 74) 4 75) 1 76) 1 77) 2
78) 1 79) 3 80) 1 81) 2 82) 1 83) 2 84) 4 85) 3 86) 2



Scanned with CamScanner

4. ವಿಷಯ ಮಾತುಗಾರಿಕೆಯಿಂದ

**ವಿವರಣೆ:** ಸೆಣಬು ಒಂದು ನಾರಿನ ಬೆಳೆಯಾಗಿದ್ದು, ಇದನ್ನು ಚಿನ್ನದ ದಾರ ಎನ್ನುವರು. ಸೆಣಬನ್ನು ಹೆಚ್ಚಾಗಿ ಗೋಣಿ ಚೀಲ ತಯಾರಿಸಲು ಉಪಯೋಗಿಸುವರು.

**87. ಬೋಧನೆ ಮತ್ತು ಕಲಿಕೆಯ ಪ್ರತಿಯೊಂದು ಹಂತದಲ್ಲಿ ಪ್ರತಿಕ್ರಿಯೆಗಳನ್ನು ಸ್ವೀಕರಿಸುತ್ತಾ, ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಸದಾ ಎಚ್ಚರಿಕೆಯಿಂದ ಇರುವ ಮೌಲ್ಯಮಾಪನ:**
1. ವಿಕಸನಶೀಲ ಮೌಲ್ಯಮಾಪನ
2. ಸಮಗ್ರ ಮೌಲ್ಯಮಾಪನ
3. ನಿರಂತರ ಮೌಲ್ಯಮಾಪನ
4. ವ್ಯಕ್ತಿನಿಷ್ಠ ಮೌಲ್ಯಮಾಪನ

**88. ಒಂದು ನಿರ್ದಿಷ್ಟ ತರಗತಿಯ ವಿದ್ಯಾರ್ಥಿಗಳಿಗೆ, ನಿರ್ದಿಷ್ಟ ಉದ್ದೇಶಗಳಿಗನುಗುಣವಾಗಿ, ನಿರ್ದಿಷ್ಟ ವಿಷಯಗಳನ್ನು ಅರ್ಥಬದ್ಧವಾಗಿ, ವ್ಯವಸ್ಥಿತವಾಗಿ ಮತ್ತು ತಾರ್ಕಿಕವಾಗಿ ಜೋಡಿಸಿ ಪರಿಣತರು ಎಚ್ಚರಿಕೆಯಿಂದ ತಯಾರಿ ಮಾಡಿರುವುದು:**
1. ಸಂಪನ್ಮೂಲ ಪುಸ್ತಕ 2. ಅಭ್ಯಾಸ ಪುಸ್ತಕ
3. ಸಂಶೋಧನ ಪುಸ್ತಕ 4. ಪಠ್ಯ ಪುಸ್ತಕ

**89. ತರಗತಿಯಲ್ಲಿ ಶಿಕ್ಷಕರು ಪಾಠ ಮಾಡುವಾಗ ಕುವೆಂಪುರವರ ಬಾಲ್ಯಜೀವನ ಮತ್ತು ಸಾಧನೆಗಳನ್ನು ವೀಡಿಯೋ ತೋರಿಸಿ, ಮಹತ್ವ ಹೇಳುವುದು ಯಾವ ಬೋಧನೋಪಕರಣಗಳಿಗೆ ಉದಾಹರಣೆಯಾಗಿದೆ:**
1. ಶ್ರವಣ ಉಪಕರಣಗಳು
2. ದೃಕ್-ಶ್ರವಣ ಉಪಕರಣಗಳು
3. ದೃಕ್ ಉಪಕರಣಗಳು 4. ಗ್ರಾಮಾಫೋನ್

**90. ವಿದ್ಯಾರ್ಥಿಗಳ ಸಾಧನೆಗಳನ್ನು ನಿರಂತರ ಮೌಲ್ಯಮಾಪನದ ಮೂಲಕ ಅಳೆಯುವ ಪರೀಕ್ಷೆಗಳನ್ನು ಶೈಕ್ಷಣಿಕವಾಗಿ ಕರೆಯುವುದು:**
1. ಅರ್ಧವಾರ್ಷಿಕ ಪರೀಕ್ಷೆ 2. ವಾರ್ಷಿಕ ಪರೀಕ್ಷೆ
3. ನೈಧಾನಿಕ ಪರೀಕ್ಷೆ 4. ಘಟಕ ಪರೀಕ್ಷೆ

## KANNADA MEDIUM
## PART-III
## CHILD DEVELOPMENT AND PEDAGOGY

**91. ಪರೀಕ್ಷೆಗಳಲ್ಲಿ "ಎ" ಶ್ರೇಣಿಯನ್ನು ಪಡೆಯಲು ಅಭ್ಯಾಸ ಮಾಡುವುದು ಇದರ ಒಂದು ಉದಾಹರಣೆಯಾಗಿದೆ:**
1. ಹವ್ಯಾಸ ಕಲಿಕೆ
2. ಬೌದ್ಧಿಕ ಕಲಿಕೆ
3. ಶಾಸ್ತ್ರೀಯ ಅನುಬಂಧನಾ
4. ಕ್ರಿಯಾ ಪ್ರಸುತಾ ಅನುಬಂಧನಾ

**92. ಬಾಹ್ಯ ಅಭಿಪ್ರೇರಣೆಗೆ ಒತ್ತು ನೀಡುವವರು:**
1. ವರ್ತನಾವಾದ ಸಿದ್ಧಾಂತಿಗಳು
2. ಮಾನವತಾವಾದ ಸಿದ್ಧಾಂತಿಗಳು
3. ಬೌದ್ಧಿಕವಾದ ಸಿದ್ಧಾಂತಿಗಳು
4. ಗೆಸ್ಟಾಲ್ಟವಾದ ಸಿದ್ಧಾಂತಿಗಳು

**93. ಅನುಭವದ ಮೂಲಕ ವ್ಯಕ್ತಿಯ ವರ್ತನೆಗಳಲ್ಲಿ ಆಗುವ ಬದಲಾವಣೆಗೆ ಕಾರಣ:**
1. ಕಲಿಕೆ 2. ಬೋಧನೆ
3. ತರಬೇತಿ 4. ಪರೀಕ್ಷೆ

**94. ರಚನಾತ್ಮಕ ಮೌಲ್ಯಮಾಪನವನ್ನು ಇದಕ್ಕೆ ಉಪಯೋಗಿಸುವುದು:**
1. ವಿದ್ಯಾರ್ಥಿಗಳನ್ನು ವರ್ಗೀಕರಿಸಲು
2. ಕಲಿಕಾ ಅಂತರವನ್ನು ಗುರುತಿಸಲು
3. ಕಲಿಕಾ ಕಠಿಣತೆಯನ್ನು ಗುರುತಿಸಲು
4. ಕಲಿಕಾ ನ್ಯೂನತೆಯನ್ನು ಗುರುತಿಸಲು

**95. ಪರಿಪಕ್ವತೆಯೂ ಇದರ ನೈಸರ್ಗಿಕ ಪ್ರಕ್ರಿಯೆಯಾಗಿದೆ:**
1. ಬೆಳವಣಿಗೆ 2. ವಿಕಾಸ
3. ವ್ಯಕ್ತಿತ್ವ
4. ಬೆಳವಣಿಗೆ ಮತ್ತು ವಿಕಾಸ

**96. ಸಾಮಾನ್ಯ ಬೌದ್ಧಿಕ ಸಾಮರ್ಥ್ಯದ ಜೊತೆಗೆ ವ್ಯಕ್ತಿಯಲ್ಲಿ ಇರುವ ವಿಶೇಷ ಸಾಮರ್ಥ್ಯವೇ:**
1. ಅವಧಾನ 2. ಮನೋಭಾವ
3. ಅಭಿಕ್ಷಮತೆ 4. ಆಸಕ್ತಿ

**97. "ಪ್ರತಿಯೊಬ್ಬ ವ್ಯಕ್ತಿಯು ಹುಟ್ಟುವಾಗ ಪ್ರತಿಭಾವಂತರಾಗಿಯೇ ಹುಟ್ಟಿದರೂ ಕೂಡಾ, ಇವರಲ್ಲಿ ಅರ್ಧದಷ್ಟು ಜನರನ್ನು ಈ ಶಿಕ್ಷಣ ವ್ಯವಸ್ಥೆಯು ಮೂರ್ಖರನ್ನಾಗಿ ಮಾಡುತ್ತದೆ" ಎಂದು ಹೇಳಿದವರು:**
1. ಜೆ.ಪಿ. ಗಿಲ್‌ಫರ್ಡ್ 2. ವ್ಯಾಟಿಸನ್
3. ಬ್ರೂನರ್ 4. ಪಿಯಾಜೆ

**98. ತರಗತಿಯಲ್ಲಿನ ವಿದ್ಯಾರ್ಥಿಗಳ ನಡುವಿನ ಸಂಬಂಧವನ್ನು ಕಂಡುಹಿಡಿಯಲು ಬಳಸುವ ತಂತ್ರ:**
1. ಸಮಾಜಮಿತಿ ಮಾಪನ
2. ಪ್ರಕ್ಷೇಪಣಾ ವಿಧಾನ
3. ಬುದ್ಧಿಶಕ್ತಿ ಪರೀಕ್ಷೆ 4. ನೈದಾನಿಕ ಪರೀಕ್ಷೆ

**99. "ಡಿಸ್‌ಲೆಕ್ಸಿಯಾ" ಯು ಈ ಸಾಮರ್ಥ್ಯದ ಕಲಿಕಾ ನ್ಯೂನತೆ:**
1. ಬರವಣಿಗೆ 2. ಓದುವುದು
3. ಉಚ್ಚಾರಣೆ 4. ದೃಷ್ಟೀಕರಿಸುವುದು

**100. "ಆಟಿಸಂ" ಒಂದು ಬಗೆಯ:**
1. ನರಸಂಬಂಧಿ ವರ್ತನಾ ರೋಗ ಸಮಷ್ಠಿ
2. ವರ್ತನಾ ರೋಗ ಸಮಷ್ಠಿ
3. ಸಾಮಾಜಿಕ ರೋಗ ಸಮಷ್ಠಿ
4. ಭಾವನಾತ್ಮಕ ರೋಗ ಸಮಷ್ಠಿ

**101. ವಿಶೇಷ ಅದ್ಯತೆಗಳುಳ್ಳ ಮಕ್ಕಳನ್ನು ಸಾಮಾನ್ಯವಾದ ಮಕ್ಕಳೊಂದಿಗೆ ಜೊತೆಗೂಡಿಸಿ ಸಾಮಾನ್ಯ ತರಗತಿಗಳಲ್ಲಿ ಶಿಕ್ಷಣ ನೀಡುವುದು ಎಂದರೆ:**
1. ವಿಶೇಷ ಶಿಕ್ಷಣ 2. ಸಾಮಾನ್ಯ ಶಿಕ್ಷಣ
3. ಅನೌಪಚಾರಿಕ ಶಿಕ್ಷಣ 4. ಸಮನ್ವಯ ಶಿಕ್ಷಣ

**102. "ವಿಕಾಸ" ಎಂದರೆ:**
1. ಗುಣಾತ್ಮಕ ಬದಲಾವಣೆ
2. ಪರಿಮಾಣಾತ್ಮಕ ಬದಲಾವಣೆ
3. ಗುಣಾತ್ಮಕ ಮತ್ತು ಪರಿಮಾಣಾತ್ಮಕ ಬದಲಾವಣೆ
4. ಭೌತಿಕ ಬದಲಾವಣೆ

**103. ವ್ಯಕ್ತಿಯಲ್ಲಿನ ವರ್ತನೆಗಳನ್ನು ಹೆಚ್ಚಿಸುವಂತೆ ಅಥವಾ ಕಡಿಮೆ ಮಾಡಲು ಪ್ರಸ್ತುತಪಡಿಸುವ ಪ್ರಚೋದನೆ:**
1. ಅಭಿಪ್ರೇರಣೆ 2. ಪುನರ್ಬಲನ
3. ಪ್ರತಿಕ್ರಿಯೆ 4. ಆತ್ಮವಿಶ್ವಾಸ

**104. ಕಲಿಯುವವನಿಗೆ ಛಿಚಿಜಜಿಕಿಟಜುಟಿ ಎನ್ನುವ ಪ್ರಕ್ರಿಯೆಯ ಮೂಲಕ ಕಲಿಕೆಯಲ್ಲಿ ಸಹಾಯ ಮಾಡುವುದು:**
1. ಸಂರಚನಾವಾದ 2. ಬೌದ್ಧಿಕವಾದ
3. ವರ್ತನಾವಾದ 4. ಮಾನವತಾವಾದ

| | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|
| 87) | 3 | 88) | 4 | 89) | 2 | 90) | 4 | 91) | 4 | 92) | 1 | 93) | 1 | 94) | 2 | 95) | 1 |
| 96) | 3 | 97) | 1 | 98) | 1 | 99) | 2 | 100) | 1 | 101) | 4 | 102) | 3 | 103) | 2 | 104) | 1 |



pramod@

Scanned with CamScanner

105. ಬುದ್ಧಿಶಕ್ತಿಯ ಬಹುಅಂಶ ಸಿದ್ಧಾಂತವನ್ನು ಮಂಡಿಸಿದವರು:
1. ಥರ್ಸ್‌ಟನ್ 2. ಗಿಲ್‌ಫೋರ್ಡ್
3. ಐರ್ಮನ್ 4. ಟೇಲರ್

106. ಸಾಮಾಜಿಕ ಬುದ್ಧಿಶಕ್ತಿ, ಮೂರ್ತ ಬುದ್ಧಿಶಕ್ತಿ ಮತ್ತು ಅಮೂರ್ತ ಬುದ್ಧಿಶಕ್ತಿ ಎಂಬ ಮೂರು ವಿಧದ ಬುದ್ಧಿಶಕ್ತಿಗಳಿವೆ ಎಂದವರು:
1. ಥಾರ್ನ್‌ಡೈಕ್ 2. ಥರ್ಸ್ಟನ್
3. ಸ್ಪಿಯರ್‌ಮನ್ 4. ಟರ್ಮನ್

107. "ಬುದ್ಧಿಮಂಥನ" ತಂತ್ರವನ್ನು ಉಪಯೋಗಿಸಿ ಇದನ್ನು ವೃದ್ಧಿಸಬಹುದಾಗಿದೆ:
1. ಬುದ್ಧಿಶಕ್ತಿ 2. ವ್ಯಕ್ತಿತ್ವ
3. ಸೃಜನಶೀಲತೆ 4. ಅಭಿಕ್ಷಮತೆ

108. ಮಾನವನ ವಿವಿಧ ಬೆಳವಣಿಗೆ ಹಂತಗಳಲ್ಲಿ ಆಗುವ ವಿಕಾಸಾತ್ಮಕ ಕಾರ್ಯಗಳನ್ನು ಪ್ರತಿಪಾದಿಸಿದವರು:
1. ಪಿಯಾಜೆ 2. ಬ್ರೂನರ್
3. ಬಂಡುರಾ 4. ಹ್ಯಾವಿಗ್‌ಹರ್ಸ್ಟ್

109. ಒಂದು ಪರೀಕ್ಷೆಯು ಯಾವುದನ್ನು ಅಳತೆ ಮಾಡಬೇಕೋ ಅದನ್ನು ಅಳತೆ ಮಾಡಿದರೆ ಆ ಪರೀಕ್ಷೆಯು:
1. ಸಮಂಜಸವಾಗಿದೆ 2. ವಿಶ್ವಾಸಾರ್ಹವಾಗಿದೆ
3. ವಸ್ತುನಿಷ್ಠತೆ ಉಳ್ಳದ್ದಾಗಿದೆ
4. ಪ್ರಾಯೋಗಿಕವಾಗಿದೆ

110. ವಿಮರ್ಶಾತ್ಮಕ ಚಿಂತನೆಯನ್ನು ಮಕ್ಕಳಲ್ಲಿ ಈ ಮೂಲಕ ಬೆಳೆಸಬಹುದು:
1. ಅನ್ವೇಷಣೆ 2. ಮೌಲ್ಯಮಾಪನ
3. ಪ್ರಾತ್ಯಕ್ಷಿಕೆ 4. ದೃಷ್ಟಾಂತೀಕರಿಸುವುದು

111. ಸಾಧನೆ ಪರೀಕ್ಷೆ ಸಾಧನವನ್ನು ವಿನ್ಯಾಸಿಸಿ ಈ ಕೆಳಗಿನವುದನ್ನು ಮಾಪನ ಮಾಡಲು ರಚಿಸಲಾಗಿದೆ:
1. ಬೌದ್ಧಿಕ ಸಾಮರ್ಥ್ಯ 2. ವಿಶೇಷ ಸಾಮರ್ಥ್ಯ
3. ಭಾವನಾತ್ಮಕ ಸಾಮರ್ಥ್ಯ
4. ಸಾಮಾಜಿಕ ಸಾಮರ್ಥ್ಯ

112. ನಿರಂತರ ಮತ್ತು ಸಮಗ್ರ ಮೌಲ್ಯಮಾಪನವು ಇದನ್ನು ಮೌಲೀಕರಿಸುತ್ತದೆ:
1. ಪಠ್ಯಕ್ರಮದ ಚಟುವಟಿಕೆಗಳು
2. ಪಠ್ಯೇತರ ಮತ್ತು ಸಹಪಠ್ಯ ಚಟುವಟಿಕೆಗಳು
3. ಪಠ್ಯಕ್ರಮ ಮತ್ತು ಪಠ್ಯೇತರ ಚಟುವಟಿಕೆಗಳು
4. ಸಾಂಸ್ಕೃತಿಕ ಚಟುವಟಿಕೆಗಳು

113. ನೈದಾನಿಕ ಪರೀಕ್ಷೆಯು ಈ ಅಂಶವನ್ನು ಗುರುತಿಸಲು ರೂಪಿಸಲಾಗುತ್ತದೆ:
1. ಕಲಿಕಾ ಸಮಸ್ಯೆ 2. ಕಲಿಕಾ ನ್ಯೂನತೆ
3. ಕಲಿಕಾ ವಿಕರ್ಷಣೆ 4. ಕಲಿಕಾ ಸಾಮರ್ಥ್ಯ

114. ಉತ್ತಮವಾಗಿ ನಿರ್ಣಯವನ್ನು ಕೈಗೊಳ್ಳುವ, ಸನ್ನಿವೇಶವನ್ನು ಗ್ರಹಿಸುವ ಮತ್ತು ತರ್ಕಿಸುವ ವ್ಯಕ್ತಿಯ ಸಾಮರ್ಥ್ಯವೇ ಬುದ್ಧಿಶಕ್ತಿಯಾಗಿದೆ ಎಂದು ಹೇಳಿದವರು:
1. ಟರ್ಮನ್ 2. ವಿಲಿಯಂ ಸ್ಟರ್ನ್
3. ಡೇವಿಡ್ ವೆಕ್ಸ್ಲರ್ 4. ಬಿನೆಟ್ ಮತ್ತು ಸೈಮನ್

115. ಅಂತರ್ಮುಖಿ ಇದಕ್ಕೆ ಸಂಬಂಧಿಸಿದೆ:
1. ಬುದ್ಧಿಶಕ್ತಿ 2. ಸಾಮಾಜಿಕ ಚಟುವಟಿಕೆ
3. ಸಾಮಾಜಿಕ ಚಲನೆ 4. ಸೃಜನಶೀಲತೆ

116. ಜ್ಞಾನ, ಅನ್ವಯ ಮತ್ತು ಕೌಶಲಗಳನ್ನು ನಿರ್ದಿಷ್ಟ ವಿಷಯದಲ್ಲಿ ಅಥವಾ ಅನೇಕ ವಿಷಯಗಳಲ್ಲಿ ಮಾಪನ ಮಾಡಲು ವಿನ್ಯಾಸಗೊಳಿಸಿರುವ ಪರೀಕ್ಷೆಯೇ ಸಾಧನ-ಪರೀಕ್ಷೆ ಎಂದು ಹೇಳಿದವರು:
1. ಇಬೆಲ್ 2. ಫ್ರೀಮ್ಯಾನ್
3. ಪಿಯಾಜೆ 4. ಬ್ರೂನರ್

117. ಒಬ್ಬ ವ್ಯಕ್ತಿಯು ಬಹುಮಾನಕ್ಕೋಸ್ಕರ ಕಾರ್ಯ ನಿರ್ವಹಿಸುವನು. ಇದಕ್ಕೆ ಉದಾಹರಣೆ:
1. ಸ್ವಯಂ ಅಭಿಪ್ರೇರಣೆ 2. ಆಂತರಿಕ ಅಭಿಪ್ರೇರಣೆ
3. ಬಾಹ್ಯ ಅಭಿಪ್ರೇರಣೆ 4. ಸಾಧನಾ ಅಭಿಪ್ರೇರಣೆ

118. ಕಲಿಕೆಯ ಮೇಲೆ ಪ್ರಭಾವ ಬೀರುವ ಪ್ರಮುಖವಾದ ಸಾಮಾಜಿಕ ಅಂಶವೆಂದರೆ:
1. ಶಾಲೆಯ ಪರಿಸರ
2. ಗೃಹ ಪರಿಸರ
3. ಶಾಲೆ ಮತ್ತು ಗೃಹ ಪರಿಸರ
4. ಶಾಲೆ ಮತತು ಮಾಧ್ಯಮ

119. ಹಿಂದಿನ ಕಲಿಕೆಯು ಹೊಸ ಕಲಿಕೆಗೆ ಅನುಕೂಲಿಸುವುದಾದರೆ, ಆ ಕಲಿಕೆಯೇ:
1. ಧನಾತ್ಮಕ ಕಲಿಕಾ ವರ್ಗಾವಣೆ
2. ಋಣಾತ್ಮಕ ಕಲಿಕಾ ವರ್ಗಾವಣೆ
3. ಪಾರ್ಶ್ವ ಕಲಿಕಾ ವರ್ಗಾವಣೆ
4. ಶೂನ್ಯ ಕಲಿಕಾ ವರ್ಗಾವಣೆ

120. ಸಂಖ್ಯೆ ಅಕ್ಷರಗಳು, ಪದಗಳು ಅಥವಾ ಹೆಸರುಗಳನ್ನು ಒಮ್ಮೆಗೆ ಮಾತ್ರ ನೆನಪಿನಲ್ಲಿಡುವ ಮಿತ ಸಾಮರ್ಥ್ಯವೇ:
1. ಅಲ್ಪಕಾಲದ ಸ್ಮೃತಿ
2. ದೀರ್ಘಕಾಲದ ಸ್ಮೃತಿ
3. ಇಂದ್ರಿಯ ಸ್ಮೃತಿ
4. ಕಾರ್ಯನಿರ್ವಹಿಸುವ ಸ್ಮೃತಿ

*****

pramod@

105) 1 106) 1 107) 3 108) 4 109) 1 110) 1 111) 1 112) 3 113) 1
114) 4 115) 2 116) 2 117) 3 118) 3 119) 1 120) 1



Scanned with CamScanner